**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

**ಸಿ.ಸಿ. ಸಂ. 778/2022**

**ಫಿರ್ಯಾದುದಾರರು** ಸರ್ಕಾರದ ಪರ ಆರಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು

ವಿರುದ್ಧ –

**ಆರೋಪಿತರು** : ಗಿರೀಶ್ ಕೆ ತಂದೆ ಚೌಕಾರು ಮೇರ
31 ವರ್ಷ, ಗುತ್ತುದಡ್ಕ ಮನೆ ಕೇಪು ಗ್ರಾಮ
ಬಂಟ್ವಾಳ ತಾಲೂಕು

**ಃ ದೋಷಾರೋಪಣೆ ಃ**

ಶ್ರೀ ಮತಿ ಪ್ರಿಯಾ ರವಿ ಜೋಗ್ಲೇಕರ್, ಬಿ.ಕಾಂ., ಎಲ್.ಎಲ್.ಎಂ., ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾ ಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಮೇಲ್ಕಂಡ ಆಪಾದಿತರಾದ ನಿಮ್ಮ ಮೇಲೆ ಕೆಳಕಂಡಂತೆ ಆರೋಪವನ್ನು ಹೊರಿಸುತ್ತಿದ್ದೇನೆ.

ಮೊದಲನೆಯದಾಗಿ ಆರೋಪಿತರಾದ ನೀವು ಪುತ್ತೂರು ತಾಲೂಕು ನೆಟ್ಟಣಿಗೆ ಮುಡ್ನೂರು ಗ್ರಾಮದ ಕನ್ನೂರು ಎಂಬಲ್ಲಿರುವ ಕನ್ನೂರು ಶಾಖಾ ಅಂಚೆ ಕಚೇರಿಯಲ್ಲಿ ದಿನಾಂಕ 13.06.2015 ರಿಂದ ದಿನಾಂಕ 26.07.2017 ರವರೆಗೆ ಬ್ರಾಂಚ್ ಪೋಸ್ಟ್ ಮಾಸ್ಟರ್ ಆಗಿ ಕರ್ತವ್ಯದಲ್ಲಿದ್ದ ಸಮಯ ಸದ್ರಿ ಅಂಚೆ ಕಚೇರಿಯಲ್ಲಿ ಚಾಸಾ-2 ನೇಯವರು ತನ್ನ ಮಗಳಾದ ಯತೀಕ್ಷಾ ಎಂಬುವಳ ಹೆಸರಿನಲ್ಲಿರುವ ಸುಕನ್ಯಾ ಸಮೃದ್ಧಿ ಯೋಜನೆಯ ಖಾತೆ ನಂಬ್ರ 100209 ಕ್ಕೆ ದಿನಾಂಕ 08.07.2017 ರಂದು ಪಾವತಿಸಿರುವ ರೂ.2000/-ವನ್ನು ಆರೋಪಿಯು ಪಾಸ್ ಪುಸ್ತಕದಲ್ಲಿ ನಮೂದಿಸಿದ್ದರೂ ಅಂಚೆ ಇಲಾಖೆಯ ಲೆಕ್ಕಕ್ಕೆ ಜಮಾ ಮಾಡದೇ ಇಲಾಖಾ ಹಣವನ್ನು ದುರುಪಯೋಗಪಡಿಸಿಕೊಂಡು ಅಂಚೆ ಇಲಾಖೆಗೆ ನಂಬಿಕೆ ದ್ರೋಹ ಮತ್ತು ಮೋಸ ವಂಚನೆ ಎಸಗಿದ್ದು, ಅಲ್ಲದೇ ಚಾಸಾ-3 ನೇಯವರು ಕನ್ನೂರು ಶಾಖಾ ಅಂಚೆ ಕಚೇರಿಯಲ್ಲಿ ತನ್ನ ಮಗಳಾದ ಫಾತಿಮಾತ್ ಹಸೈನುನ್ನಿಸಾ ಎಂಬುವಳ ಸುಕನ್ಯಾ ಸಮೃದ್ದಿ ಯೋಜನೆಯ ಖಾತೆ ನಂಬ್ರ

100319 ಕ್ಕೆ ದಿನಾಂಕ 10.09.2016 ರಿಂದ ದಿನಾಂಕ 26.07.2017 ರವರೆಗೆ ಪಾವತಿಸಿರುವ ಒಟ್ಟು ರೂ.11,000/- ರೂಪಾಯಿಯ ಬಗ್ಗೆ ಪಾವತಿ ರಶೀದಿಯನ್ನು ಮಾತ್ರ ನೀಡಿ ಸದ್ರಿ ಖಾತೆಯ ಪಾಸ್ ಪುಸ್ತಕದಲ್ಲಿ ಹಣ ಪಾವತಿಸಿರುವ ಬಗ್ಗೆ ನಮೂದಿಸದೇ ಇದ್ದುದಲ್ಲದೇ ಸದ್ರಿ ಹಣವನ್ನು ಅಂಚೆ ಇಲಾಖೆಯ ಲೆಕ್ಕಕ್ಕೆ ಜಮಾ ಮಾಡದೇ ಇಲಾಖಾ ಹಣವನ್ನು ದುರುಪಯೋಗಪಡಿಸಿಕೊಂಡು ಅಂಚೆ ಇಲಾಖೆಗೆ ನಂಬಿಕೆ ದ್ರೋಹ ಮೋಸ ವಂಚನೆ ಎಸಗಿರುವುದಲ್ಲದೇ ಕರ್ನೂರು ಅಂಚೆ ಕಚೇರಿಯಲ್ಲಿ ಚಾಸಾ-4 ನೇಯವರು ಹೊಂದಿರುವ ಉಳಿತಾಯ ಖಾತೆ ನಂಬ್ರ 3194356 ಕ್ಕೆ ದಿನಾಂಕ 13.06.2015 ರಿಂದ ದಿನಾಂಕ 27.06.2017 ರವರೆಗೆ ಪಾವತಿಸಿರುವ ಒಟ್ಟು ರೂ.37,000/- ರೂಪಾಯಿಯ ನಗದು ಹಣವನ್ನು ಆರೋಪಿಯು ಅಂಚೆ ಇಲಾಖೆಯ ಲೆಕ್ಕಕ್ಕೆ ಜಮಾ ಮಾಡದೇ ಇಲಾಖಾ ಹಣವನ್ನು ದುರುಪಯೋಗಪಡಿಸಿಕೊಂಡು ಅಂಚೆ ಇಲಾಖೆಗೆ ನಂಬಿಕೆ ದ್ರೋಹ ಮೋಸ ವಂಚನೆ ಎಸಗಿದ್ದು ಆ ಮೂಲಕ ಕಲಂ 409 ಹಾಗೂ 420 ರಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಮಾಡಿರುವಿರಿ.

ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.

ದಿನಾಂಕಃ 02.02.2023
ಸ್ಥಳ ಃ ಪುತ್ತೂರು. ದ.ಕ.

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಪುತ್ತೂರು, ದ.ಕ.**

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

<u>ಸಿ.ಸಿ. ಸಂ. **778/2022**</u>

**ಫಿರ್ಯಾದುದಾರರು** : ಸರ್ಕಾರದ ಪರ ಆರಕ್ಷಕರು, ಪುತ್ತೂರು ಗ್ರಾಮಾಂತರ ಠಾಣೆ, ಪುತ್ತೂರು

- ವಿರುದ್ಧ –

**ಆರೋಪಿತರು** : ಗಿರೀಶ್ ಕೆ ತಂದೆ ಚೌಕಾರು ಮೇರ
31 ವರ್ಷ, ಗುತ್ತುದಡ್ಕ ಮನೆ ಕೇಪು ಗ್ರಾಮ
ಬಂಟ್ವಾಳ ತಾಲೂಕು

**<u>ಃ ಆರೋಪಿಯ ಸಮರ್ಥನೆ ಃ</u>**

ಪ್ರ. 1 : ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ :

ಪ್ರ. 2 : ನೀವು ಸದರಿ ಆಪಾದನೆಯನ್ನು ಒಪ್ಪಿಕೊಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ?

ಉತ್ತರ ಃ

ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.

ದಿನಾಂಕಃ 02.02.2023
ಸ್ಥಳ ಃ ಪುತ್ತೂರು. ದ.ಕ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
**ಮತ್ತು ಜೆ.ಎಂ.ಎಫ್.ಸಿ, ಪುತ್ತೂರು, ದ.ಕ**